ISSN : 2581-7728
Tumbe International e-Magazine
A Multilanguage Magazine
Issue-1
Volume-5
Jan-June: 2022

# ಮಹರ್ಷಿ ವಾಲ್ಮೀಕಿಯ ಜೀವನ ಕಥೆ

**ಲಿಖಿತ್ ವಿ**
U11GT21A0294
ಬಿಎ ಮೊದಲನೇ ವರ್ಷ, ದ್ವಿತೀಯ ಸೆಮಿಸ್ಟರ್
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತುಮಕೂರು -572104
likthithliki123@gmail.com Ph.no: 9019818576



ಗಂಗಾ ನದಿ ತೀರದ ಅರಣ್ಯದಲ್ಲಿ ಪ್ರಚೇತನ ಎಂಬ ಋಷಿ ಇದ್ದನು. ಅವನಿಗೆ ರತ್ನಾಕರ ಎಂಬ ಮಗನಿದ್ದನು. ಅವನು ಸಹ ತಂದೆಯಂತೆ ಸಜ್ಜನನಾಗಿದ್ದುಕೊಂಡು ಪೂಜಾ ಪಾಠ ಯಜ್ಞಾವನಗಳಲ್ಲಿ ತೊಡಗಿಸಿಕೊಂಡಿದ್ದನು. ಅವನ ಹೆಂಡತಿಯೂ ಸಹ ಅವನಂತೆ ದೈವಭಕ್ತಯಾಗಿದ್ದಳು. ಅವನಿಗೆ ಪ್ರತಿ ಕೆಲಸದಲ್ಲಿ ಸಹಾಯ ಮಾಡುತ್ತಿದ್ದಳು. ಅವರ ಜೀವನ ಸುಖಕರವಾಗಿ ಸಾಗಿತ್ತು. ಆದರೆ ಅವರಿದ್ದ ಪ್ರದೇಶದಲ್ಲಿ ಭೀಕರ ಬರಗಾಲ ಬಂದು ಅವರ ಬದುಕು ಸಾಗುವುದು ದುಸ್ತರವಾಯಿತು. ಆಗ ರತ್ನಾಕರ ತನ್ನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಆ ಜಾಗವನ್ನು ಬಿಟ್ಟು ದೂರ ಬಂದನು. ನಂತರ ರತ್ನಾಕರ ಒಂದು ಬೇಟೆಗಾರರ ಜನಾಂಗ ವಾಸಿಸುತ್ತಿದ್ದ ಅರಣ್ಯಕ್ಕೆ ಬಂದನು. ಅವರ ಸಹವಾಸ ದೋಷದಿಂದ ಅವನು ಸಹ ಬೇಡರಂತೆ ವಾಸಿಸಲು ಪ್ರಾರಂಭಿಸಿದನು. ಅವನು ವಾಸಿಸುತ್ತಿದ್ದ ಕಾಡಿನ ದಾರಿಯಲ್ಲಿ ಸಾಗುವ ಜನರನ್ನು ಎದುರಿಸಿ ಅವರ ಹಣವನ್ನು ಕಿತ್ತುಕೊಂಡು ಅದರಲ್ಲಿ ಜೀವನ ಮಾಡತೊಡಗಿದನು. ಬೇರೆ ಜನರನ್ನು ಕಾಡಿಸಿ, ಪೀಡಿಸಿ, ಹೆದರಿಸಿ ಅವರ ಸಂಪತ್ತನ್ನು ಕಿತ್ತುಕೊಂಡು ಅದರಲ್ಲಿ ಬದುಕಲು ಪ್ರಾರಂಭಿಸಿದನು.

ಒಮ್ಮೆ ರತ್ನಾಕರ ಕಾಡಿನ ದಾರಿಯಿಂದ ಹಾದು ಹೋಗುತ್ತಿರುವ ತಪಸ್ವಿಗಳ ಗುಂಪನ್ನು ತಡೆದು ನಿಲ್ಲಿಸಿದನು. ಹಣ ಕೊಡುವಂತೆ ಅವರನ್ನು ಹೆದರಿಸಿದನು. ಆಗ ಆ ತಪಸ್ವಿಗಳು ಅವನಿಗೆ "ಈ ರೀತಿ ಕಂಡವರ ಹಣದಲ್ಲಿ ಬದುಕುವುದು ಸರಿಯಲ್ಲ, ಈ ತರ ಕೆಟ್ಟದ್ದನ್ನು ಮಾಡಿದರೆ ಖಂಡಿತ ನಿನಗೆ ಕೆಟ್ಟದಾಗುತ್ತದೆ. ನಿನ್ನ

ಪಾಪದ ಫಲವನ್ನು ನೀನೆ ಅನುಭವಿಸಬೇಕಾಗುತ್ತದೆ. ನಿನ್ನ ಹೆಂಡತಿ ಮಕ್ಕಳು ಸಹ ನಿನ್ನ ಪಾಪದದಲ್ಲಿ ಪಾಲನ್ನು ತೆಗೆದುಕೊಳ್ಳಲಾರರು ಎಂದು ಎಚ್ಚರಿಸಿದರು. ಆದರೆ ರತ್ನಾಕರ ಅವರ ಮಾತಿನಾರ್ಥವನ್ನು ಅರಿಯದೆ ನಾನು ಇಷ್ಟೆಲ್ಲ ಮಾಡುವುದು ನನ್ನ ಹೆಂಡತಿ ಮಕ್ಕಳಿಗಾಗಿಯೇ ತಾನೇ? ಅವರೇಕೆ ನನ್ನ ಪಾಪದಲ್ಲಿ ಪಾಲನ್ನು ತೆಗೆದುಕೊಳ್ಳುವುದಿಲ್ಲ? ಖಂಡಿತ ತೆಗೆದುಕೊಳ್ಳುತ್ತಾರೆ" ಎಂದು ಉತ್ತರಿಸಿದನು. ಆಗ ತಪಸ್ವಿಗಳು ನಸುನಗುತ್ತ ಅವನಿಗೆ ಯಾರು ಸಹ ನಿನ್ನ ಪಾಪದಲ್ಲಿ ಪಾಲನ್ನು ತೆಗೆದುಕೊಳ್ಳುವುದಿಲ್ಲ. ಅನುಮಾನವಿದ್ದರೆ ಹೋಗಿ ನಿನ್ನ ಹೆಂಡತಿ ಮಕ್ಕಳನ್ನು ಕೇಳಿಕೊಂಡು ಬಾ ಎಂದರು.

ರತ್ನಾಕರ ತಪಸ್ವಿಗಳ ಮಾತಿನಿಂದ ಎಚ್ಚರಿತವಾಗಿ ತನ್ನ ಹೆಂಡತಿ ಮಕ್ಕಳನ್ನು ನನ್ನ ಪಾಪದಲ್ಲಿ ಪಾಲನ್ನು ತೆಗೆದುಕೊಳ್ಳುವಿರಾ? ಎಂದು ಕೇಳಲು ಮನೆಗೆ ಹೋಗಲು ಮುಂದಾದನು. ಆದರೆ ಅಷ್ಟರಲ್ಲಿ ಅವನ ತಲೆಯಲ್ಲಿ ನಾನು ಮನೆಗೆ ಹೋಗಿ ಬರುವಷ್ಟರಲ್ಲಿ ಈ ತಪಸ್ವಿಗಳಿಗೆ ಓಡಿ ಹೋದರೆ, ಎಂಬ ಅನುಮಾನ ಮೂಡಿತು. ಅದಕ್ಕಾತ ಅವರನ್ನು ಅಲ್ಲಿದ್ದ ಮರಕ್ಕೆ ಕಟ್ಟಿ ಆತುರದಿಂದ ಮನೆಗೆ ಹೋದನು. ಮನೆಗೆ ಹೋಗಿ ಅವನ ಹೆಂಡತಿಗೆ ನೇರವಾಗಿ ನೀನು ನಾನು ಮಾಡುತ್ತಿರುವ ಪಾಪದಲ್ಲಿ ಪಾಲು ತೆಗೆದುಕೊಳ್ಳುತ್ತೀಯಾ? ಇಷ್ಟೆಲ್ಲಾ ಪಾಪ ಮಾಡುತ್ತಿರುವುದು ನಿನ್ನನ್ನು ಹಾಗೂ ಮಕ್ಕಳನ್ನು ಸಾಕಲು ತಾನೇ? ಎಂದು ವಾದಿಸಿದನು. ಆಗಾಕೆ ಅವನಿಗೆ, ನಮ್ಮನ್ನು ಸಾಕುವುದು ನಿನ್ನ ಕರ್ತವ್ಯ ಅದಕ್ಕಾಗಿ ನೀನು ಪಾಪ ಮಾಡಬೇಕಾಗಿಲ್ಲ, ನೀನು ಬೇರೆ ಕೆಲಸ ಮಾಡಿ ನಮ್ಮನ್ನು ಸಾಕಬಹುದು ಎಂದಳು.

ಅವನಿಗೆ ಆ ಕ್ಷಣವೇ ಯಾರು ಸಹ ನನ್ನ ಪಾಪದಲಿ ಪಾಲನ್ನು ತೆಗೆದುಕೊಳ್ಳುವುದಿಲ್ಲ, ನಾನು ಮಾಡಿದ ಪಾಪದ ಫಲವನ್ನು ನಾನೊಬ್ಬನೇ ಅನುಭವಿಸಬೇಕಾಗುತ್ತದೆ ಎಂಬುದು ಅರ್ಥವಾಯಿತು. ಕೂಡಲೆ ಆತ ಆ ತಪಸ್ವಿಗಳ ಕಡೆಗೆ ಓಡಿದನು.

ರತ್ನಾಕರ ಆ ತಪಸ್ವಿಗಳ ಕಡೆಗೆ ಓಡುತ್ತಾ ಹೋಗಿ ಅವರ ಕಟ್ಟುಗಳನ್ನು ಬಿಚ್ಚಿದನು. ಕೂಡಲೇ ಅವರ ಕಾಲಿಗೆ ಅಡ್ಡ ಬಿದ್ದು ನನ್ನ ಹೆಂಡತಿ ಮಕ್ಕಳು ನಾನು ಮಾಡಿದ ಪಾಪದಲ್ಲಿ ಪಾಲನ್ನು ತೆಗೆದುಕೊಳ್ಳಲು ತಯಾರಿಲ್ಲ, ಹೇಗಾದರೂ ಮಾಡಿ ನನ್ನನ್ನು ಕಾಪಾಡಿ ಎಂದು ಬೇಡಿಕೊಂಡನು. ಆಗ ಆ ತಪಸ್ವಿಗಳು ಅವನಿಗೆ ನೀನು ಈ ಮರದ ಕೆಳಗೆ ಕೂತು ರಾಮ ನಾಮವನ್ನು ಜಪಿಸು ನಿನ್ನೆಲ್ಲ ಪಾಪ ಪರಿಹಾರವಾಗುತ್ತದೆ ಎಂದೇಳಿ ಹೋದರು. ನಂತರ ರತ್ನಾಕರ ಆ ಮರದ ಕೆಳಗೆ ಕುಳಿತು ರಾಮ ನಾಮವನ್ನು ಜಪಿಸಲು ಪ್ರಾರಂಭಿಸಿದನು. ಆದರೆ ಅವನ ಘೋರ ಪಾಪದದಿಂದಾಗಿ ರಾಮನಾಮ ಅವನ ನಾಲಿಗೆಯಿಂದ ಹೊರಬರಲಿಲ್ಲ. ಅವನ ಎಷ್ಟು ದಿನಗಳ ಕಾಲ ಮರಾ ಮರಾ ಎಂದು ಜಪಿಸಿದನು. ನಂತರ ಅವನ ಪಾಪದ ಪ್ರಾಯಶ್ಚಿತವಾಗುತ್ತಿದ್ದಂತೆ ಅವನ ಬಾಯಿಂದ ರಾಮ ನಾಮ ಹೊರ ಬಂದಿತು. ಅವನು ರಾಮ ರಾಮ ಎಂದು ಜಪಿಸಲು ಪ್ರಾರಂಭಿಸಿದನು. ಅವನು ಹಾಗೆ ರಾಮನಾಮವನ್ನು ಜಪಿಸುತ್ತಾ ಅದೇ ಮರದ ಕೆಳಗೆ ಕುಳಿತನು. ಅವನ ಮೇಲೆ ಹುತ್ತ ಬೆಳೆದದ್ದು ಅವನಿಗೆ ಗೊತ್ತೇ ಆಗಲಿಲ್ಲ. ಅಷ್ಟರ ಮಟ್ಟಿಗೆ ಅವನು ರಾಮನಾಮದಲ್ಲಿ ಮುಳುಗಿದ್ದನು. ಒಂದಿನ ಅವನಿಗೆ ರಾಮನಾಮ ಜಪಿಸಲು ಹೇಳಿದ ತಪಸ್ವಿಗಳ ಗುಂಪು ಅದೇ ಕಾಡಿನ ರಸ್ತೆಯ ಮೂಲಕ ಹೊರಟಿದ್ದರು. ಆಗ ಅವರಿಗೆ ಉತ್ತದಿಂದ ರಾಮ ನಾಮ ಕೇಳಿ ಬಂತು. ಆಗವರು ಆ ಹುತ್ತವನ್ನು ಒಡೆದು ನೋಡಿದರೆ ಅವರಿಗೆ ಆಶ್ಚರ್ಯವಾಯಿತು. ಅವನ ಕಠಿಣ ತಪಸ್ಸನ್ನು ಮೆಚ್ಚಿ ಅವರು ಅವನಿಗೆ ವಾಲ್ಮೀಕಿ ಎಂದು ಹೆಸರಿಟ್ಟರು. ಸಂಸ್ಕೃತದಲ್ಲಿ ವಾಲ್ಮೀಕಿ ಎಂದರೆ ವಾಲ್ಮೀಕಿ ತಮಸಾ ನದಿ ತೀರದಲ್ಲಿ ತನ್ನದೇ ಆದ ಒಂದು ಆಶ್ರಯ ಮಾಡಿಕೊಂಡು ತನ್ನ ಶಿಷ್ಯರೊಂದಿಗೆ ವಾಸಿಸತೊಡಗಿದನು.

ಒಂದು ದಿನ ನಾರದಮಹರ್ಷಿಗಳು ವಾಲ್ಮೀಕಿ ಆಶ್ರಮಕ್ಕೆ ಬಂದು ಅವನಿಗೆ ಹಾಗೂ ಅವನ ಶಿಷ್ಯರಿಗೆ ಶ್ರೀ ರಾಮನ ಚರಿತ್ರೆಯ ಬಗ್ಗೆ ಅಲ್ಪಸಲ್ಪ ವಿವರಿಸಿ ಹೋದರು.

ಶ್ರೀ ರಾಮನ ಚರಿತ್ರೆಯನ್ನು ಕೇಳಿ ವಾಲ್ಮೀಕಿಯ ಮನಸ್ಸು ಸಂಪೂರ್ಣವಾಗಿ ಕರಗಿತ್ತು. ಅವನು ಮನಸ್ಸಲ್ಲಿ ಕರುಣೆ ತುಂಬಿತು. ಅವತ್ತಿನಿಂದ ವಾಲ್ಮೀಕಿ ಮಹರ್ಷಿ ವಾಲ್ಮೀಕಿ ಆದನು. ಒಂದಿನ ಮಧ್ಯಾಹ್ನ ಮಹರ್ಷಿ ವಾಲ್ಮೀಕಿ ಅವರು ಸ್ನಾನ ಮಾಡಲು ತಮಸಾ ನದಿಗೆ ಹೋದರು. ಎರಡು ಜೋಡಿ ಕ್ರೌಂಚ ಪಕ್ಷಿಗಳು ಕಾಣಿಸಿದವು. ಅವೆರಡು ಬಹಳಷ್ಟು ಮುದ್ದಾಗಿದ್ದವು. ತಮ್ಮ ಪ್ರೇಮ ವಿಲಾಪದಲ್ಲಿ ಮುಳಗಿದ್ದವು. ಅಷ್ಟರಲ್ಲಿ ಒಂದು ಬಾಣ ವೇಗವಾಗಿ ಬಂದು ಗಂಡು ಕ್ರೌಂಚ ಪಕ್ಷಿಗೆ ಚುಚ್ಚಿತು. ಅದು ಸ್ಥಳದಲ್ಲೇ ಸಾವನ್ನಪ್ಪಿತ್ತು. ಕಣ್ಣೆದುರು ಗಂಡನ ಸಾವನ್ನು ನೋಡಿ ಹೆಣ್ಣು ಕ್ರೌಂಚ ಪಕ್ಷಿ ಕೂಡ ಎದೆ ಹೊಡೆದುಕೊಂಡು ಸತ್ತಿತು. ಈ ದೃಶ್ಯವನ್ನು ನೋಡಿ ವಾಲ್ಮೀಕಿ ಮಹರ್ಷಿಯವರ ಮನಸ್ಸು ಬಹಳಷ್ಟು ಮರುಗಿತು. ಅವರು ಆ ಬಾಣ ಬಿಟ್ಟ ಬೇಡನಿಗೆ ಬಹಳಷ್ಟು ಬೈದರು. ಆಗ ಅವರ ಬಾಯಿಂದ ಬಂದ ಮಾತುಗಳು ಛಂದಸ್ಸಿನ ಶ್ಲೋಕ ರೂಪದಲ್ಲಿದ್ದವು. ಅದೇ ಕೊರಗಿನಲ್ಲಿ ಅವರು ಆಶ್ರಮಕ್ಕೆ ಬಂದರು. ಅವರು ಆಶ್ರಮಕ್ಕೆ ಬಂದು ವಿಶ್ರಮಿಸಿಕೊಳ್ಳುತ್ತಿದ್ದರು. ಸಂಜೆಯಾಗಿ ಸೂರ್ಯಾಸ್ತದ ಸಮಯವಾಗಿತ್ತು. ಅದೇ ಸಮಯದಲ್ಲಿ ಸೃಷ್ಟಿಕರ್ತ ಬ್ರಹ್ಮದೇವ ಅವರ ಆಶ್ರಮದಲ್ಲಿ ಪ್ರತ್ಯಕ್ಷನಾದನು. ಕರುಣಾಮಯಿ ಹೃದಯದ ವಾಲ್ಮೀಕಿ ಮಹರ್ಷಿಗಳಿಗೆ ಶ್ರೀ ರಾಮನ ಚರಿತ್ರೆ ಸಂಪೂರ್ಣವಾಗಿ ಕಾಣುವಂತೆ ಅನುಗ್ರಹಿಸಿದನು. ಆನಂತರ ವಾಲ್ಮೀಕಿ ಮಹರ್ಷಿಗಳು ಶ್ರೀರಾಮನ ಚರಿತ್ರೆಯನ್ನು "ರಾಮಾಯಣ" ಎಂಬ ಹೆಸರಿನಿಂದ ಕಾವ್ಯರೂಪದಲ್ಲಿ ರಚಿಸಿದರು. ಅದು ಸಂಸ್ಕೃತದ ಮೊದಲ ಕಾವ್ಯವಾಯಿತು. ಅದಕ್ಕಾಗಿ ರಾಮಾಯಣವನ್ನು ಆದಿಕಾವ್ಯ ಎಂದು ಕರೆಯುತ್ತಾರೆ. ವಾಲ್ಮೀಕಿ ಮಹರ್ಷಿಗಳು ರಾಮಾಯಣ ಕಾಲದಲ್ಲಿ ಇದ್ದುಕೊಂಡೇ ರಾಮಾಯಣವನ್ನು ಬರೆದರು ಎಂಬುದು ವಿಶೇಷ. ರಾಮನ ಮಕ್ಕಳು ಲವಕುಶರು ಇವರ ಮೊದಲ ಶಿಷ್ಯರು ಎಂಬುದು ಸಹ ಒಂದು ದೊಡ್ಡ ವಿಶೇಷ. ಲವಕುಶರು ರಾಮಾಯಣವನ್ನು ಕಾವ್ಯರೂಪದಲ್ಲಿ ಹಾಡುತ್ತ ಅದರ ಪ್ರಚಾರ ಮಾಡಿದರು.